ವ್ಯಕ್ತಿಗಳು ಈ ಪ್ರದೇಶದಲ್ಲಿ, ಹಳ್ಳಿಯಲ್ಲಿ ಕಂಡುಬಂದರೆ, ನಿನ್ನನ್ನು ಜೈಲಿಗೆ ಕಳುಹಿಸಿಬಿಡುತ್ತೇನೆ.''

ಆತನ ಮಾತುಗಳನ್ನು ಕೇಳಿದ್ದ ಅಂಗಡಿಯವ ನಡುಗಿಹೋಗಿದ್ದ. 'ಇದ್ಯಾವ ಕರ್ಮ!' ಎಂದು ತನ್ನ ಪರಿಸ್ಥಿತಿಯ ಬಗ್ಗೆ ಬೇಸರಗೊಂಡಿದ್ದ. ಏಕೆಂದರೆ, ಆದಿವಾಸಿಗಳು ಬಟ್ಟೆಗಳ ಬಗ್ಗೆ ವಿಶೇಷವಾಗಿ ತಲೆ ಕೆಡಿಸಿಕೊಳ್ಳುವವರಲ್ಲ. ಅರೆನಗ್ನರಾಗಿ ಅಲೆದಾಡುವುದು ಅವರ ಸ್ವಭಾವ; ಮಹಿಳೆಯರೂ ಕೂಡ. ಒಂದು ವೇಳೆ ಅಂತಹ ವ್ಯಕ್ತಿಗಳು ಕಣ್ಣಿಗೆ ಬಿದ್ದರೆ, ಅಂಗಡಿಯವನು ಕೂಡಲೇ ಅವರನ್ನು ತನ್ನ ಅಂಗಡಿಗೆ ಕರೆತಂದು, ನಾಲ್ಕಾರು ಜೊತೆ ಹೊಸ ಬಟ್ಟೆಗಳನ್ನು ಅವರಿಗೆ ನೀಡಿ, 'ಮತ್ತೆಂದೂ ಬಟ್ಟೆಯಿಲ್ಲದೇ, ಅರೆನಗ್ನರಾಗಿ ಓಡಾಡಬೇಡಿ...' ಎಂದು ಎಚ್ಚರಿಕೆ ನೀಡಿ ಕಳುಹಿಸಿಕೊಡುತ್ತಿದ್ದ. ಈ ರೀತಿಯಲ್ಲಿ ಆತ ಆ ಹಳ್ಳಿಯವರಿಗೆ ಮಾತ್ರವಲ್ಲ, ಅಕ್ಕಪಕ್ಕದ ಹಳ್ಳಿಯವರಿಗೂ ಬಟ್ಟೆಗಳನ್ನು ವಿತರಣೆ ಮಾಡಿದ್ದ. ತೊಡುವ ಬಟ್ಟೆಗಳ ಜೊತೆಯಲ್ಲಿ ಈಗೀಗ ಸರ್ಕಾರ ನೀಡುತ್ತಿದ್ದ ಹಾಸುವ–ಹೊದೆಯುವ ಬಟ್ಟೆಗಳನ್ನೂ ಆತ ಹಂಚುತ್ತಿದ್ದ.

> ಆ ಹಳ್ಳಿಯಲ್ಲಿ ನಡೆದ ಮೊದಲ ಕಳವಿನ ಘಟನೆಯದು. ಅದೂ ಸಾರ್ವಜನಿಕ ರಸ್ತೆ ಹಾಗೂ ಸೇತುವೆಯ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದ ವಸ್ತುವಿನ ಕಳ್ಳತನ. ಸ್ವಲ್ಪ ಹೊತ್ತಿನಲ್ಲಿಯೇ ಅಲ್ಲಿಗೆ ಆಗಮಿಸಿದ ಗುತ್ತಿಗೆದಾರನ ಕೋಪ ನೆತ್ತಿಗೇರಿತ್ತು.

ಬಟ್ಟೆಗಳ ಉಪಯೋಗವನ್ನೇ ಸರಿಯಾಗಿ ತಿಳಿಯದಿದ್ದ ಆದಿವಾಸಿಗಳಿಗೆ ಈಗೀಗ ಚಳಿಯ ಅನುಭವವೂ ಆಗತೊಡಗಿತ್ತು. ಹೆಚ್ಚೆಚ್ಚು ವಸ್ತ್ರಗಳು ವಿತರಣೆಯಾಗುತ್ತಿದ್ದಂತೆ, ಅದಕ್ಕನುಗುಣವಾಗಿ ಅವರಿಗೆ ತಗುಲುತ್ತಿದ್ದ ಚಳಿಯೂ ಹೆಚ್ಚುತ್ತಾಹೋಯಿತು! ಅದೇ ಆಕಾಶ, ಅದೇ ಕಾಡು, ಅದೇ ಸೂರ್ಯ, ಅದೇ ಚಂದ್ರ... ಆದರೆ, ಈ ಚಳಿ ಇದ್ದಕ್ಕಿದ್ದಂತೆ ಅಧಿಕವಾಗಿದ್ದು ಹೇಗೆ ಎನ್ನುವುದು ಉತ್ತರ ಸಿಗದ ಪ್ರಶ್ನೆಯಾಗಿತ್ತು. ಜೊಜೊಹಾತು ಹಳ್ಳಿಯ ಜನರು ಈಗೀಗ ಬಟ್ಟೆಯನ್ನು ಧರಿಸುತ್ತಾರೆ, ಹಾಸುತ್ತಾರೆ, ಹೊದೆಯುತ್ತಾರೆ, ತಮ್ಮನ್ನು ಕಾಡುವ ಚಳಿಯನ್ನು ಹೋಗಲಾಡಿಸಿಕೊಳ್ಳುತ್ತಾರೆ. ಬಟ್ಟೆಯ ಕಾರಣದಿಂದಾಗಿ ಚಳಿ ಅಧಿಕವಾಗತೊಡಗಿತ್ತು; ತೀವ್ರರೂಪ ಪಡೆದುಕೊಳ್ಳತೊಡಗಿತ್ತು.

ಅಂಗಡಿಯವನು ದೂರದ ರಾಂಚಿಯವನು. ಅದೊಂದು ದಿನ ಆತನಿಗೆ ಅದ್ಯಾವುದೋ ಸುದ್ದಿ ಬಂತು. ಅದರ ಪ್ರಕಾರ, ಆತನ ಊರಿನಲ್ಲಿ ಯಾವುದೋ ಗಂಭೀರ ಸಮಸ್ಯೆ ಉಂಟಾಗಿತ್ತು. ಆತ ಅಂಗಡಿಯನ್ನೇ ಮುಚ್ಚಿಕೊಂಡು ಹೋಗಲೇಬೇಕಾದ ಅನಿವಾರ್ಯ ಸ್ಥಿತಿ. ಆತ ಆ ಊರಿನಿಂದ ಹೊರಟುಹೋದ. ವಾರದಲ್ಲಿ ಮೂರ್ನಾಲ್ಕು ಬಾರಿ ಬಂದುಹೋಗುತ್ತಿದ್ದ ಸರ್ಕಾರಿ ಅಧಿಕಾರಿ ಒಂದೆರಡು ಬಾರಿ ಅಲ್ಲಿಗೆ ಬಂದು, ಅಂಗಡಿ ಮುಚ್ಚಿರುವುದನ್ನು ನೋಡಿ, ಅಕ್ಕಪಕ್ಕದಲ್ಲಿ ವಿಚಾರಿಸಿಕೊಂಡು, ಸಿಡುಕುತ್ತ ಹೊರಟುಹೋಗಿದ್ದ; ನಂತರ ಆತನು ಆ ಹಳ್ಳಿಯವರ ಪಾಲಿಗೆ ನಾಪತ್ತೆಯಾಗಿದ್ದ. ಅಂಗಡಿಯವನಂತೂ ಮರಳಿ ಆ ಊರಿಗೆ ಬರಲೇ ಇಲ್ಲ. ಆ ಅಂಗಡಿಯನ್ನು ಗೆದ್ದಲುಹುಳಗಳು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳತೊಡಗಿದ್ದವು.

★★★

ಗೋದಾಮಿನಿಂದ ಸಿಮೆಂಟ್ ಮೂಟೆಗಳನ್ನು ಹೇರಿಕೊಂಡು ಹೋಗುತ್ತಿದ್ದ ಎತ್ತಿನ ಗಾಡಿಯ